ಮಂತ್ರಿಯನ್ನು ಕರೆದು ಈ ಸಮಸ್ಯೆಯ ಬಗ್ಗೆ ಆತಂಕ ತೋಡಿಕೊಂಡ. 'ಮಹಾಮಂತ್ರಿಗಳೆ ಇದು ಖಂಡಿತವಾಗಿ ಭೂತಚೇಷ್ಟೆಯೇ ಇರಬೇಕು. ನಾಳೆಯೇ ಪೂಜೆ ಮಾಡಿಸಿ ಪರಿಹಾರ ಮಾಡಬೇಕು' ಎಂದನು. ಆಗ ಮಂತ್ರಿ, 'ಮಹಾರಾಜ ಇದು ಯಾವ ಚೇಷ್ಟೆಯೂ ಅಲ್ಲ, ದೈವದ ಮುನಿಸೂ ಅಲ್ಲ. ಇದಕ್ಕೆಲ್ಲಾ ಕಾರಣ ತಾವೇ, ಅಂದು ನಿಮ್ಮ ಮಗಳನ್ನು ಒಂದು ಜೇನುಹುಳು ಕಚ್ಚಿತೆಂದು ಇಡಿ ರಾಜ್ಯದ ಎಲ್ಲಾ ಜೇನುಗೂಡುಗಳಿಗೆ ಬೆಂಕಿ ಇಡಿಸಿದಿರಿ. ಅವುಗಳೆಲ್ಲಾ ಸತ್ತಮೇಲೆ ಈ ರೈತರ ಬೆಳೆಗಳಿಗೆ ಪರಾಗಸ್ಪರ್ಶ ಮಾಡುವವರಾರು? ಮಕರಂದ ಹೀರುವವರಾರು?' ಎಂದನು. ಆಗ ರಾಜನಿಗೆ ತನ್ನ ತಪ್ಪಿನ ಅರಿವಾಗಿ ಜ್ಞಾನೋದಯವಾಯಿತು.

ಜೇನುನೊಣಗಳು ಪರಾಗಸ್ಪರ್ಶ ಮಾಡದ ಹೊರತು ಯಾವ ಬೆಳೆಗಳು ಫಸಲು ನೀಡಲು ಸಾಧ್ಯವಿಲ್ಲ ಎಂದು ಮನವರಿಕೆಯಾಯಿತು. ಅತೀವವಾದ ಪಶ್ಚಾತ್ತಾಪದ ಬಳಿಕ ಪಕ್ಕದ ಕಾಡಿನ ಹೆಮ್ಮರವೊಂದರಲ್ಲಿದ್ದ ನೂರಾರು ಜೇನುಗೂಡುಗಳು ಇರುವ ಬಗ್ಗೆ ಮಾಹಿತಿ ಲಭ್ಯವಾಯಿತು. ಸಿಂಗರಸ ಆ ಕಾಡಿಗೆ ತನ್ನ ಮಗಳನ್ನು ಕರೆದೊಯ್ದನು. 'ಪ್ರಿಯ ಜೇನುಸಂಸಾರವೇ, ನನ್ನ ಹಾಗೂ ನನ್ನ ಮಗಳ ಅಜ್ಞಾನ ಅಹಂಕಾರಗಳಿಂದ ನಿಮ್ಮ ಸಂಬಂಧಿಕರ ಮಾರಣಹೋಮವೇ ನಡೆಯಿತು. ಅದರ ಫಲವನ್ನು ನಾನೂ ನನ್ನ ಜನತೆ ಅನುಭವಿಸುತ್ತಿದ್ದೇವೆ. ದಯಮಾಡಿ ನಮ್ಮ ತಪ್ಪನ್ನು ಕ್ಷಮಿಸಿ ನಮ್ಮ ರಾಜ್ಯಕ್ಕೆ ಬಂದು ರೈತರ ಬೆಳೆಗಳು ಫಸಲುಗಟ್ಟುವಂತೆ ಮಾಡಿ' ಎಂದು ಅಂಗಲಾಚಿದನು. ಆಗ ರಾಣಿಜೇನು ಯುವರಾಣಿಯನ್ನುದ್ದೇಶಿಸಿ 'ನೋಡಿದೆಯಾ ರಾಣಿ, ನಿನಗೆ ಆ ದಿನವೇ ನಮ್ಮವನೊಬ್ಬ ಹೇಳಿದ್ದ ಹೂಗಳಿರುವುದು ನಿಮ್ಮ ಆನಂದಕ್ಕಲ್ಲ ಬದಲಾಗಿ ನಮ್ಮ ಆಹಾರಕ್ಕೇ ಎಂದು. ಆದರೂ ನೀವು ಮಾನವರು ಹೂಗಳನ್ನು ಕೀಳುವಿರಿ ಜೇನುಗೂಡುಗಳನ್ನು ಸುಡುವಿರಿ. ಒಂದು ವೇಳೆ ನಾವಿರದೇ ಹೋದರೇ ಮುಡಿಯಲು ಹೂವು, ತಿನ್ನಲು ಅನ್ನವೇ ಇರುವುದಿಲ್ಲ ಎಂಬ ಸತ್ಯ ಅರಿವಾಯಿತೇ ಈಗ?' ಎಂದಿತು. ರಾಣಿಜೇನಿನ ಮಾತಿಗೆ ಯುವರಾಣಿ ತಲೆತಗ್ಗಿಸಿ ನಿಂತಳು. ರಾಜನ ಮಾತಿಗೆ ಒಪ್ಪಿದ ರಾಣಿಜೇನು 'ಆಯ್ತು ಮಹಾರಾಜ ನಿನ್ನ ತಪ್ಪು ನಿನಗರಿವಾಗಿದೆ. ಬೆಂಕಿಹಚ್ಚಿ ನೀನು ನಮ್ಮವರನ್ನು ಸುಟ್ಟಂತೆ ಹಸಿವಿನ ಬೆಂಕಿಯಿಂದ ನಿಮ್ಮವರನ್ನು ನಾವು ಸುಡಲಾರೆವು. ಏಕೆಂದರೆ ನಿಮ್ಮ ಹಾಗೆ ನಾವು ಮನುಷ್ಯರಲ್ಲ' ಎಂದು ಹೇಳಿ ತನ್ನ ಸಂಸಾರಸಮೇತ ಹೂವಳ್ಳಿಯ ಕಡೆಗೆ ಹೊರಟಿತು. ಆಗಸದಲ್ಲಿ ತೇಲುವ ಮೋಡಗಳು ಭುವಿಗೆ ಇಳಿಯುವಂತೆ ಕೋಟ್ಯಂತರ ಜೇನುನೊಣಗಳು ಇಡೀ ಹೂವಳ್ಳಿಗೇ ಇಳಿದವು ಇದನ್ನು ಕಂಡು ರೈತರು ಸಂತಸಗೊಂಡರು. ■



# ನವಿಲೇ ನವಿಲು

■ ಚನ್ನಬಸವ ಪುತ್ತೂರ್ಕರ, ಉಡುಪಿ
ಕಲೆ: ಸಂತೋಷ್ ಸಸಿಹಿತ್ಲು



ಒಂದ್ ಕಾಲ್ದಲ್ಲಿ ನವಿಲು
ಅಂದ್ರೆ ಅತ್ಯಪರೂಪದ ಪಕ್ಷಿ
ರಾಷ್ಟ್ರಪಕ್ಷಿ ಅಂದ್ರೆ
ಸಾಮಾನ್ಯವೇನು
ಕಂಡ್ ಕಡೆಯೆಲ್ಲಾ
ಕಾಣಲು ನವಿಲು!

ನವಿಲಿನ ಜುಟ್ಟು
ಒಟ್ಟು ಮೈಬಣ್ಣ
ಗರಿಯ ತುಂಬೆಲ್ಲಾ
ನೂರಾರು ಹೊಳೆವ ಕಣ್ಣ
ನೋಡುವ ಖುಷಿಯೇ ಚೆನ್ನ
ನೀವು ಕಂಡೀರೇ ಅಣ್ಣಾ!

ಮೃಗಾಲಯದಲ್ಲಿತ್ತು
ನವಿಲಿಗೂ ಒಂದು ಗತ್ತು
ಎಲ್ಲೋ ಒಮ್ಮೆ ಕೇಂವ್
ಕೇಂವ್ ಎಂದು ಕೂಗಿದರೆ
ಖುಷಿಯೋ ಖುಷಿ
ಅಷ್ಟೇ ಪ್ರೀತಿಯಿಂದ ಬಾ
ಬಾರೆಂದು ಕರೆಯುವ
ಪರಿಯೇ ಚೆಂದ!

ನವಿಲಿನ ಗರಿಯೊಂದು
ಸಿಕ್ಕರೆ ಸಾಕು ಅದೃಷ್ಟ
ಎಂದರಿತು ಹೆಮ್ಮೆಯಿಂದ
ಪುಸ್ತಕದೊಳಗೆ ಇಟ್ಕೊಂಡು
ನವಿಲಿನ ಗರಿಯು
ವಾರದ ಬಳಿಕ
ಮರಿಯನ್ನು ಹಾಕುವ
ಪರಿಯನು ಗೆಳೆಯ ಗೆಳತಿಯರಿಗೆ
ಗುಟ್ಟಾಗಿ ತೋರಿಸುವ
ಉಮೇದು!

ಹೂಂ ಮತ್ತೆ ಈಗೇನು ಗೊತ್ತೇ
ಅಪರೂಪದ ಮಾತೇ ಇಲ್ಲ
ಎಲ್ಲೆಡೆಯೂ ನವಿಲೇ ನವಿಲು
ಮನೆಯಂಗಳದಲ್ಲಿ
ಮನೆ ಮಾಡಲ್ಲಿ
ಕೇಂಕ್! ಕೇಂವ್ ಕೇಂವ್
ಕೂಗು ನಿತ್ಯ ಸತ್ಯ!

ಎಲ್ಲಿಂದ ಬಂದಿಹವೋ
ಈ ಪಾಟಿ ನವಿಲಿನ ಸಾಲು
ಹಿತ್ಲಲಿ ಹೊಲದಲ್ಲಿ
ನವಿಲೋ ನವಿಲು
ಚಿಗುರು ತರಕಾರಿಗಳೆಲ್ಲ
ನವಿಲ ಪಾಲು!
ಏನೂ ಮಾಡಂಗಿಲ್ಲ ಪಾಪ
ನಮ್ಮ ರಾಷ್ಟ್ರಪಕ್ಷಿ ನವಿಲು! ■